ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮಂತ್ರಿ ಆನುಮಂತಿ ನೀಡಲ್ಪಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ,

"ರಿಲೀಫಿನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ವೇತನ, ವಿಶ್ರಾಂತಿ ವೇತನ ಹಾಗೂ ಭತ್ಯಗಳ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ".

* ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ಮನವಿಗಳು

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು —ಅಜೆಂಡಾದಲ್ಲಿ ನಿಮ್ಮ ಪ್ರಶ್ನೆ ಬಂದಿಲ್ಲ ಎನ್ನುವುದಾದರೆ ನನ್ನ ಕೊಠಡಿಗೆ ತಾವು ದಯವಿಟ್ಟು ಬಂದು ಕೇಳಿ. ಆದರೆ ಅರ್ಜೆಂಟ್ ಆಗಿದೆಂದು ಕಂಡುಬಂದರೆ ನಾಳೆ ಅಥವಾ ನಾಡಿದ್ದೇ ಹಾಕಿಸೋಣ.

ಶ್ರೀ ಪಟಮಕ್ಕಿ ರತ್ನಾಕರ್.—ಸ್ವಾಮಿ, ನಾನು ಪ್ರಶ್ನೆಯನ್ನು ಕಳುಹಿಸಿ ೧೫ ದಿವಸವಾದರೂ ಇನ್ನೂ ಉತ್ತರ ಬಂದಿಲ್ಲ. ತಾವು ಲಿಖಿತವಾಗಿ ಉತ್ತರ ಕೊಡುತ್ತೇವೆಂದು ಹೇಳಿದ್ದರೂ ಏತಕ್ಕೆ ಕೊಡಲಿಲ್ಲ ?

ಅಧ್ಯಕ್ಷರು.—ತಾವು ದಯವಿಟ್ಟು ಕೂಳಿತುಕೊಳ್ಳಿ. ಅದನ್ನೆಲ್ಲಾ ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಫೈಲ್‌ನ್ನು ತರಿಸಿ ನೋಡಬೇಕಾಗುತ್ತದೆ.

ಶ್ರೀ ಪಟಮಕ್ಕಿ ರತ್ನಾಕರ್.—೧೫ ದಿವಸವಾಯಿತು ನಾನು ಕಳುಹಿಸಿ. ಆದರೂ ಉತ್ತರ ಬಂದಿಲ್ಲ. ಆದ್ದರಿಂದ ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ಸ್ವಾಮಿರಾವ್.—ಸ್ವಾಮಿ, ನಾನು ಸುಮಾರು ೫೦ ಪ್ರಶ್ನೆಗಳನ್ನು ಕಳುಹಿಸಿಕೊಟ್ಟಿದ್ದೇನೆ. ಇದುವರೆಗೆ ಒಂದೂ ಕೂಡ ಬಂದಿಲ್ಲ.

ಅಧ್ಯಕ್ಷರು.—ಅದು ಏನಾಗಿದೆ ಎಂಬುದನ್ನು ನಾನು ನೋಡುತ್ತೇನೆ. ದಯವಿಟ್ಟು ಕೂತುಕೊಳ್ಳಿ. ಅದು ಏತಕ್ಕೆ ಬಂದಿಲ್ಲ ಎಂಬುದನ್ನು ನಾನು ವಿಚಾರಮಾಡಿ ನೋಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ಈ ವಿಚಾರದಲ್ಲಿ ಮಾತನಾಡಿದ್ದಾರೆ. ಮಂಲೆನಾಡು ವಿಶ್ವವಿದ್ಯಾನಿಲಯವನ್ನು ಶಿವಮೊಗ್ಗಾದಲ್ಲಿ ಸ್ಥಾಪಿಸುವ ವಿಚಾರದಲ್ಲಿ ಪ್ರಶ್ನೆಯನ್ನು ಅವರು ಕಳುಹಿಸಿದ್ದಾರೆ. ಇದನ್ನು ನೀವು ಚುಕ್ಕೆ ಗುರ್ತಿಲ್ಲದ ಪ್ರಶ್ನೆಯಾಗಿ ಪರಿವರ್ತನೆ ಮಾಡಿದರೆ ಹೇಗೆ ? ಸ್ವಾಮಿರಾಯರು ಕಳುಹಿಸಿದ ಚುಕ್ಕೆ ಪ್ರಶ್ನೆ ಒಂದಕ್ಕೂ ಕೂಡ ಸರ್ಕಾರದಿಂದ ಉತ್ತರ ಬಂದಿಲ್ಲ. ಅಂದಮೇಲೆ ಅವರು ಏತಕ್ಕೆ ಪ್ರಶ್ನೆಗಳನ್ನು ಕಳುಹಿಸಬೇಕು?

ಅಧ್ಯಕ್ಷರು.—ನನ್ನ ಕೊಠಡಿಗೆ ಅವರು ಬರಲಿ. ವಿಚಾರಮಾಡಿ ನೋಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಚುಕ್ಕೆ ಪ್ರಶ್ನೆ ಎಂದು ಮಾನ್ಯ ಸದಸ್ಯರು ಕಳುಹಿಸಿದ್ದನ್ನು ತಾವು ಚುಕ್ಕೆ ಗುರ್ತಿಲ್ಲದ ಪ್ರಶ್ನೆಯಾಗಿ ಪರಿವರ್ತನೆ ಮಾಡಿದರೆ, ಸದಸ್ಯರು ಪ್ರಶ್ನೆಗಳನ್ನು ಏತಕ್ಕೆ ಕೇಳಬೇಕು ?

(ಗೊಂದಲ)

ಅಧ್ಯಕ್ಷರು.—ನಾನು ಫೈಲನ್ನು ತರಿಸಿ ನೋಡಬೇಕಾಗುತ್ತದೆಂದು ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಅದನ್ನೆಲ್ಲಾ ಇಲ್ಲಿ ತರಿಸಿನೋಡುವುದಕ್ಕಾಗುವುದಿಲ್ಲ. ಇಬ್ಬರು ಮಾನ್ಯ ಸದಸ್ಯರೂ ನನ್ನ ಕೊಠಡಿಗೆ ಬಂದರೆ ಫೈಲು ತರಿಸಿ ನೋಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೂ ಕೂಡ ಉತ್ತರ ಬಂದಿಲ್ಲ.

ಅಧ್ಯಕ್ಷರು.—ನಿಮ್ಮ ಪ್ರಶ್ನೆಗೂ ಉತ್ತರ ಬಂದಿಲ್ಲವೆಂದರೆ, ದಯವಿಟ್ಟು ನನ್ನ ಕೊಠಡಿಗೆ ಬನ್ನಿ.

ಶ್ರೀ ಎಂ.ಎಸ್. ಕೃಷ್ಣನ್.—ನಾವು ಅನೇಕ ಪ್ರಶ್ನೆಗಳನ್ನು.....

ಅಧ್ಯಕ್ಷರ .—ನಿಮಗೆ ಸಾಕಷ್ಟು ಅವಕಾಶವನ್ನು ಮಾಡಿಕೊಡುತ್ತೇನೆ, ದಯವಿಟ್ಟು ಆಲ್ಲಿ ಬಂದು ನನ್ನನ್ನು ನೋಡಿ. ಫೈಲನ್ನು ತರಿಸಿ ನೋಡಿ ಹೇಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ, ನಾನು ೨೦-೩೦ ಪ್ರಶ್ನೆಗಳನ್ನು ಕೇಳಿದ್ದೇನೆ. ಅದರಲ್ಲಿ ಯಾವುದಂ ಚುಕ್ಕೆ ಗುರ್ತಿನ ಪ್ರಶ್ನೆ, ಯಾವುದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಯನ್ನು ತಾವು ಮಾಡುತ್ತೀರೆಂದು ನಮಗೆ ಗೊತ್ತಾಗುವುದಿಲ್ಲ. ಇನ್ನು ಕೆಲವು ಪ್ರಶ್ನೆಗಳು ಏನಾಗುತ್ತವೆ ಎಂಬುದೂ ಕೂಡ ಗೊತ್ತಾಗುವುದಿಲ್ಲ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದು ವುದಕ್ಕೆ ಎದ್ದು ನಿಂತಿದ್ದೇನೆ. ಪ್ರಜಾವಾಣಿ ಪತ್ರಿಕೆಯಲ್ಲಿ ಇಬ್ಬರು ಮಹಿಳೆಯರನ್ನು ಕೊಲೆಪಾತಕಿಗಳು ಯಾರೋ ಕೊಲೆಮಾಡಿದ್ದಾರೆ. ಆ ಕೊಲೆ ಪಾತಕಿಗಳು ಇನ್ನೂ ಪತ್ತೆ ಆಗಿಲ್ಲ. ಇದರಿಂದಾಗಿ ಆಲ್ಲಿ ಸಂತ್ರಸ್ತರು ಇರತಕ್ಕ ಜನರು ಅದರಲ್ಲೂ ಮಹಿಳೆಯರು ತುಂಬಾ ಭಯಭೀತರಾಗಿದ್ದಾರೆ. ಮಾನ್ಯ ಗೃಹಮಂತ್ರಿಗಳು ಇಲ್ಲೇ ಇದ್ದಾರೆ. ಅವರ ಏನು ಹೇಳುತ್ತಾರೆ ಕೇಳೋಣ. ಈ ವಿಚಾರಕ್ಕೆ ಸಂಬಂಧಿಸಿದಂತೆ ನಿಯಮ ೬೮ರ ಕೆಳಗೆ ತಮಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಅದು ನಾಳೆ ಬರಬಹುದು ಅಥವಾ ಇನ್ನೊಂದು ದಿವಸ ಬರಬಹುದು. ನಿಮಗೆ ಅರ್ಜೆಂಟ್ ಇದ್ದರೆ ನನ್ನ ಚೇಂಬರ್‌ಗೆ ಬಂದು ನೋಡಿ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸ್ವಾಮಿ, ಕೊಲೆಯಾದವರ ತಲೆಯೇ ಪತ್ತೆ ಇಲ್ಲ. ಇದರ ಬಗ್ಗೆ ಹೇಳಿಕೆಯನ್ನು ಕೊಡಲು ಮಾನ್ಯ ಗೃಹಮಂತ್ರಿಗಳಿಗೆ ಅವಕಾಶವನ್ನು ಕೊಡಿ. ಅವರು ಇಲ್ಲೇ ಇದ್ದಾರೆ ಅವರು ಏನು ಹೇಳುತ್ತಾರೆ ತಿಳಿದುಕೊಳ್ಳೋಣ.

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ. ಅನಂತರ ನೋಡೋಣ.

ಗಮನ ಸೆಳೆಯುವ ಸೂಚನೆ

ಬೀದರಿನ ಕೆಲವು ಶಾಲೆಗಳಿಗೆ ಕಳೆದ ನಾಲ್ಕು ವರ್ಷಗಳಿಂದ ಅನುದಾನವನ್ನು ಬಿಡುಗಡೆ ಮಾಡದಿರುವುದರಿಂದ ಸಿಬ್ಬಂದಿ ವರ್ಗದವರಿಗೆ ತೊಂದರೆಯುಂಟಾಗಿರುವ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್).—ಮಾನ್ಯ ಅಧ್ಯಕ್ಷರೇ, ಬೀದರಿನ ಸಿದ್ಧಾರ್ಥ ಪ್ರಾಥಮಿಕ ಶಾಲೆ ಮತ್ತು ಕಿರಿಯ ಮಹಾವಿದ್ಯಾಲಯ ಹಾಗೂ ರಾಯಚೂರಿನ ಆನಂದ ಪ್ರೌಢಶಾಲೆಗಳಿಗೆ ಕಳೆದ ನಾಲ್ಕು ವರ್ಷಗಳಿಂದ ಅನುದಾನವನ್ನು ಬಿಡುಗಡೆ ಮಾಡದಿರುವುದರಿಂದ ಸಿಬ್ಬಂದಿ ವರ್ಗದವರಿಗೆ ತೊಂದರೆ ಉಂಟಾಗಿರುವ ವಿಚಾರದ ಬಗ್ಗೆ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಸಿದ್ಧಾರ್ಥ ಪ್ರಾಥಮಿಕ ಶಾಲೆ ಬೀದರ್.—ಸಿದ್ಧಾರ್ಥ ಕನ್ನಡ ಪ್ರಾಥಮಿಕ ಶಾಲೆ ಬೀದರ್, ಈ

ಶಾಲೆಯನ್ನು ೧೯೮೧-೮೨ ರಿಂದತೆರೆಯಲು ಡಾ॥ ಬಾಬಾಸಾಹೇಬ್‌ಅಂಬೇದ್ಕರ್ ಸ್ಮಾರಕ ಸಮಿತಿಯವರಿಗೆ ಅನುಮತಿಯನ್ನು ಬೀದರ್ ಉಪ-ನಿರ್ದೇಶಕರು ೨೯-೬-೧೯೮೧ರಲ್ಲಿ ನೀಡಿರುತ್ತಾರೆ. ಈ ಶಾಲಾ ಆಡಳಿತ ಮಂಡಳಿಯವರು ಪರಿಶಿಷ್ಟ ಜಾತಿ ವರ್ಗದ ಆಡಳಿತ ಮಂಡಳಿ ಎಂದು ಶಾಲಾ ಪ್ರಾರಂಭದಿಂದಲೆ ಅನುದಾನ ಕೋರಿರುತ್ತಾರೆ. ಆದರೆ ಈ ಶಾಲಾ ಆಡಳಿತ ಮಂಡಳಿಯವರು, ಅನುಮತಿಯನ್ನು ೨೯-೬-೧೯೮೧ರಲ್ಲಿ ನೀಡಿದ್ದರೂ ಅನುದಾನ ಕೋರಿ ದಿನಾಂಕ ೧೬-೧೧-೧೯೮೩ರಲ್ಲಿ ಅಪೂರ್ಣ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆಡಳಿತ ಮಂಡಳಿಯಲ್ಲಿ ೧೧ ಜನ ಸದಸ್ಯರಿದ್ದು, ಗುಲ್ಬರ್ಗದ ವಿಳಾಸ